# ಸೆಣ್ಣಿಯ ಉಡುಪು

■ **ಬೀರಣ್ಣ ನಾಯಕ ಮೊಗಟಾ**

ಚಿತ್ರ: ಸಂತೋಷ್ ಸಸಿಹಿತ್ಲು



ಎಲ್ಲರ ಉಡುಪಿನ ರಾಶಿಯಲಿ,
ತನ್ನಯ ಉಡುಪನು ಹುಡುಕುವಳು
ಚಡ್ಡಿ, ಅಂಗಿ, ಪ್ಯಾಂತು ಎನ್ನುತ,
ತಾನೇ ಧರಿಸಲು ಮುಂದಾಗುವಳು

ಚೆಡ್ಡಿಯು ತಲೆಗೆ, ಅಂಗಿಯು ಕಾಲಿಗೆ,
ತನ್ನದೇ ಚೆಂದ ಎನ್ನುವಳು
ಪುಟಿ ಪುಟಿ ಕಾಲಿಗೆ, ಎಲ್ಲವು ತೊಡಿಸಿ,
ತೋರಿಸಿ ಉಡುಪನು ಕುಣಿಯುವಳು


ಬಣ್ಣದ ಅಂಗಿ ಕಂಡರೆ ಸಾಕು,
ಸೆಣ್ಣಿಯು ನಗುವಳು ಕುಣಿಯುತಲಿ
ಕೆಂಪು, ಬಿಳಿಪು, ಹಳದಿಯ ಉಡುಪದು,
ಮಮ್ಮನು ತೊಡಿಸಲು ಖುಷಿಯಲ್ಲಿ

ಅಂದದ ಉಡುಪನು ಧರಿಸಿದ ಸೆಣ್ಣಿ
ಪಪ್ಪಗೆ ತೋರಿಸಿ, ನಡೆಯುವಳು
ಅಜ್ಜಿಯು ಮುದ್ದಿಸಿ, ಎತ್ತಲು ಸೆಣ್ಣಿ,
ಬೇರೆ ಉಡುಪು ಬೇಕೆನ್ನುವಳು

ಸೆಣ್ಣಿಯ ಅಜ್ಜಗೆ ಮೊಮ್ಮಗಳೆಂದರೆ,
ಎಲ್ಲಿಲ್ಲದ ಮಹಾ ಪ್ರೀತಿ
ಹೊಸ ಹೊಸ ಅಂಗಿ ತೊಡಿಸುತ ಹೇಳುವ
ಕಲಿಯ ಬೇಕು ನಿಯಮ ನೀತಿ

■

## ಕುಂಚ ಪ್ರಪಂಚ





**ಭರತ್ ರಾವ್**
3ನೇ ತರಗತಿ,
ಪೂರ್ಣ ಚೇತನ
ಪಬ್ಲಿಕ್ ಸ್ಕೂಲ್,
ಮೈಸೂರು

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ. **ವಿಳಾಸ:** editorsu@sudha.co.in





**ಹರಿ ಸುಂದರ್ ಕೌಶಿಕ್**
7ನೇ ತರಗತಿ, ಜ್ಞಾನಜ್ಯೋತಿ ಶಾಲೆ,
ಬೆಂಗಳೂರು